ಶ್ರೀ ಬಿ. ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯ ಪಾನುಗಾರಿಕೆಯ ಸಹಕಾರ ಸಂಘಕ್ಕೆ ಸರ್ಕಾರದವರು ಕೊಟ್ಟಿರತಕ್ಕ 175 ಲಕ್ಷ ರೂಪಾಯಿಗಳಲ್ಲಿ ಎಷ್ಟು ಹಣ ಆದರಲ್ಲಿ ಸಬ್ಸಿಡಿ ಮತ್ತು ಎಷ್ಟು ಹಣವನ್ನು ಆದರಲ್ಲಿ ಹಿಂದಕ್ಕೆ ಕೊಡಬೇಕಾಗಿದೆ, ಆ ಹಣವನ್ನು ವಸೂಲ್ಮಾಡುವುದಕ್ಕೆ ನಿಗದಿ ಮಾಡಿರತಕ್ಕ ಮಾರ್ಗ ಏನು ? ಇದೆಷ್ಟು ವರ್ಷಗಳ ಸ್ಕೀಮು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅಗ್ರಿಕಲ್ಚರ್ ರೀಫೈನಾನ್ಸಿಂಗ್ ಕಾರ್ಪೊರೇಷನ್ನಿನಿಂದ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಕೋಟಿ ರೂಪಾಯಿಗಳನ್ನು ಸಾಲನೀಡಬೇಕೆಂದು ತೀರ್ಮಾನವಾಗಿದೆ. ಅದರ ಮುಂದಿನ ವರ್ಷದಲ್ಲಿ ರೀಫೈನಾನ್ಸಿಂಗ್ ಕಾರ್ಪೊರೇಷನ್ನಿನವರು 7 ಕೋಟಿ ರೂಪಾಯಿಗಳನ್ನು ಮತ್ತು ರಾಜ್ಯ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಹೀಗೆ ಒಟ್ಟು 8 ಕೋಟಿ ರೂಪಾಯಿಗಳನ್ನು ಒದಗಿಸಿ 1,500 ಬೋಟುಗಳನ್ನು ಕೊಡುವುದಕ್ಕೆ ವ್ಯವಸ್ಥೆಮಾಡಲಾಗಿದೆ. ಈ ಬೋಟುಗಳನ್ನು ಮೊದಲನೇ ವರ್ಷ 200ನ್ನೂ ಆದರ ಮಾರನೆ ವರ್ಷ ಒಂದು ಸಾವಿರ ಅನಂತರ ಎರಡು ಸಾವಿರ ಬೋಟುಗಳಂತೆ ಒದಗಿಸತಕ್ಕ ಒಂದು ವ್ಯವಸ್ಥೆ ಮಾಡಲು ತೀರ್ಮಾನ ಮಾಡಿದ್ದೇವೆ.

ಶ್ರೀ ಪಿ. ಪಿ. ಐತಾಳ್.—ಸರ್ಕಾರದವರು ಒದಗಿಸತಕ್ಕ ಬೋಟುಗಳೆಷ್ಟು ಮತ್ತು ಅಗ್ರಿಕಲ್ಚರಲ್ ರೀಫೈನಾನ್ಸಿಂಗ್ ಕಾರ್ಪೊರೇಷನ್ನಿನವರು ಒದಗಿಸತಕ್ಕ ಬೋಟುಗಳ ಸಂಖ್ಯೆ ಎಷ್ಟು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೊದಲು ನಾವೇ ಕೊಡುತ್ತಿದ್ದೆವು. ಈಗ ಆದನ್ನ ಬದಲಾವಣೆ ಮಾಡಿದೆ.

ಶ್ರೀ ರತ್ನಕುಮಾರ್ ಕಟ್ಟೆಮಾರ್.—ಸರ್ಕಾರಕ್ಕೆ ಮೊದಲು ಕೊಟ್ಟಿದ್ದ ಅರ್ಜಿಗಳೇನಿವೆ ಅವುಗಳನ್ನು ಆ ಫೆಡರೇಷನ್ನಿಗೆ ವರ್ಗಾಯಿಸಿದಮೇಲೆ ಅಲ್ಲಿ ಅವುಗಳ ಬಗ್ಗೆ ಬಹಳ ಪಕ್ಷಪಾತ ಹಾಗೂ ತಾರತಮ್ಯ ಭಾವನೆಯಿಂದ ಕಾಣಲಾಗುತ್ತಿದೆ. ಆದ್ದರಿಂದ ಅಂಥ ಜನರ ಅನುಕೂಲಕ್ಕಾಗಿ ಇಂಥದೇ ಇನ್ನೊಂದು ಫೆಡರೇಷನ್ ಸ್ಥಾಪಿಸುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಒಂದನ್ನು ಸರಿಯಾಗಿ ನಡೆಸಿಕೊಂಡುಹೋದರೆ ಸಾಕು ಎಂಬುದು ಸರ್ಕಾರದವರ ಅಭಿಪ್ರಾಯ. ಆದ್ದರಿಂದ ಇನ್ನೊಂದಕ್ಕೆ ಅವಕಾಶಕೊಡುವುದ ಕ್ಕಾಗುವುದಿಲ್ಲ.

ಶ್ರೀ ಎಂ. ಎಂ. ಜಾಲಿಸತಿಗಿ.—ಸರ್ಕಾರದವರು ಖರೀದಿಮಾಡತಕ್ಕ ಬೋಟುಗಳಲ್ಲಿ ಎಷ್ಟು ಶಿಲ್ಕು ಉಳಿದಿವೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಎಲ್ಲವನ್ನೂ ಅಲಾಟ್‌ಮಾಡಿ ಆಗಿದೆ. ಶಿಲ್ಕು ಯಾವುದೂ ಉಳಿದಿಲ್ಲ.

Supply of Electricity to Pumps in North Kanara District

298. Sri D. S. NADKARNI (Ankola).—

Will the Chief Minister be pleased to state.—

(*a*) the total number of pumps sets in North Kanara district to which electricity was supplied during 1968-69 (Talukwar information may please be furnished) ;

(*b*) the number of applications for pumpsets, received from each taluk in North Kanara district during 1969-70 ;

(*c*) out of them the number of pumsets to which it may be possible to supply electricity ?

Sri D. PARAMESWARAPPA (Deputy Minister for Major Irrigation and Electricity) [on behalf of Sri VEERENDRA PATIL Chief Minister)].—

(*a*) 379 (Details *vide* statement 'A' appended).

(*b*) 967 applications up to 31st July 1969 (Details *vide* statement 'B' appended).—

(*c*) It may be possible to supply electricity to about 600 pumpsets.

STATEMENT 'A'

Statement showing Talukwar details of the I. P. Sets serviced in North Kanara District

North Kanara :—

Sl. No.	*Taluk*	*No. of I. P. Sets servise l up to 31-3-1969*
1.	Ankola ...	56
2.	Bhatkal ...	20
3.	Haliyal ...	1
4.	Honnavar ...	93
5.	Karwar ...	3
6.	Kumta ...	91
7.	Mundgod ...	10
8.	Siddapur ...	17
9.	Sirsi ...	75
10.	Supa ...	1
11.	Yellapur ...	12
	Total ...	379

STATEMENT 'B'

Statement showing the Talukwar details of the number of requisitions for the power supply to I. P. Sets.

North Kanara :—

Sl. No.	*Taluk*	*No. of pending applications as on 31-7-1969.*
1.	Ankola	136
2.	Bhatkal	56
3.	Haliyal	2
4.	Honnavar	42
5.	Karwar	25
6.	Kumta	245
7.	Mundgod	28
8.	Siddapur	15
9.	Sirsi	290
10.	Supa	5
11.	Yellapur	123
	Total ...	967

ಶ್ರೀ ಡಿ ಎಸ್. ನಾಡಕರ್ಣಿ.—ಇನ್ನು ವರ್ಷಕ್ಕೆ ಉಳಿದಿರುವುದೆರ್ನಾ ಆರು ತಿಂಗಳು ಮಾತ್ರ. ಇಷ್ಟರಲ್ಲಿ ತಿಂಗಳಿಗೆ 100 ಐ. ಪಿ. ಸೆಟ್ಟುಗಳಿಗೆ ಸರ್ವೀಸ್ ಮಾಡುವುದಕಾಗುತ್ತದೆಯೇ ?

† ಶ್ರೀ ಡಿ. ಪರಮೇಶ್ವರಪ್ಪ.—ಹಾಗೆ ದಾಮಾಷ ಪ್ರಕಾರ ಮಾಡುವುದಕ್ಕಾಗುವುದಿಲ್ಲ. ಈ ವರ್ಷ 600ಕ್ಕೆ ಮಾತ್ರ ಸರ್ವೀಸ್ ಕೊಡಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ.

Sri H. V. KOUJALGI (Minister for Revenue).—Sir, before the Question No. 467 is put, I request that it may be held-over for one or two days, because I could not get all the connected files, and some of the figures are not up-to-date.

Mr. SPEAKER.—As decided Question is held over.

Grant of amount to complete the unfinished Famine Work in Raichur District

522. Sri M. NAGAPPA (Raichur).—

Will the Minister for Revenue be pleased to state :—

(*a*) whether the Government has decided to grant the necessary amount to bring the unfinished famine works to the safe stage ;

(*b*) the amount claimed by the Deputy Commissioner, Raichur ;

(*c*) the amount sanctioned by the Government ?

Sri H. V. KOUJALGI (Minister for Revenue).—

(*a*) Yes.

(*b*) Rs. 6,45,000.

(*c*) Rs. 6,65,000.

ಶ್ರೀ ಎಂ. ನಾಗಪ್ಪ.—ಅಪೂರ್ಣವಾಗಿರತಕ್ಕ ಕೆಲಸಗಳನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುತ್ತದೆಂದು ಕೇಳಿದ್ದ ಪ್ರಶ್ನೆಗೆ ಉತ್ತರವಾಗಿ 6 ಲಕ್ಷ 45 ಸಾವಿರ ಎಂದು ಹೇಳಿ ಅನಂತರ ಆ ಕೆಲಸಗಳನ್ನು ಪೂರ್ಣಗೊಳಿಸಲು ಕ್ಲೈಂ ಮಾಡಿರತಕ್ಕ ಹಣವೆಷ್ಟು ಎಂದು ಕೇಳಿರುವ ಪ್ರಶ್ನೆಗೆ 6 ಲಕ್ಷ 65 ಸಾವಿರ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಅಂದರೆ 20 ಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟಿದ್ದೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅವರು ಅಷ್ಟು ಹಣವನ್ನು ಹೆಚ್ಚಿಗೆ ಖರ್ಚುಮಾಡಿದ್ದಾರೆ.

ಶ್ರೀ ಎಂ. ನಾಗಪ್ಪ.—ಕನ್ನಡದ ಪ್ರಶ್ನೋತ್ತರದಲ್ಲಿ ಕೊಟ್ಟಿರತಕ್ಕ ಅಂಕಿಅಂಶಗಳಿಗೂ ಮತ್ತು ಇಂಗ್ಲೀಷ್ ಪ್ರಶ್ನೋತ್ತರದಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳಿಗೂ ಬಹಳ ಹೆಚ್ಚು ಕಡಮೆ ಇದೆ. ಈ ಎರಡರಲ್ಲಿ ಯಾವುದು ಸರಿಯಾದ್ದು ?

ಶ್ರೀ ಎಚ್. ವಿ. ಕೌಜಲಗಿ.—ಇಂಗ್ಲೀಷಿನಲ್ಲಿ ಇರತಕ್ಕ ಅಂಕೀ ಅಂಶಗಳು ಸರಿಯಾಗಿವೆ.

ಶ್ರೀ ಬಿ. ಪಿ. ಗಂಗಾಧರ್.—ಈ ಪರಿಹಾರಕಾರ್ಯಗಳನ್ನು ಹೀಗೇ ಯಾವಾಗಲೂ ಮಳೆಗಾಳಿಗೆ ನಾಶವಾಗತಕ್ಕ ರೀತಿಯಲ್ಲಿ ಆ ಕೆಲಸಗಳನ್ನು ಮಾಡುತ್ತೀರೋ ಅಥವಾ ಅವುಗಳನ್ನು ಏನಾದರೂ ಒಂದು ಶಾಶ್ವತವಾದ ತಳಹದಿಯಮೇಲೆ ಮಾಡಬೇಕೆಂದಿದ್ದೀರೋ ?

ಶ್ರೀ ಎಚ್. ವಿ. ಕೌಜಲಗಿ.—ಅಂಥ ನಾಶವಾಗತಕ್ಕ ಕೆಲಸಗಳನ್ನು ಯಾವತ್ತೂ ಮಾಡಿಲ್ಲ. ಮುಂದೆಯೂ ಅಂಥ ಕೆಲಸಗಳನ್ನು ಮಾಡುವುದಿಲ್ಲ.